## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ

**ಸಿಸಿ ನಂ.466/2018**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಅಬಕಾರಿ ಪೊಲೀಸ್

-ಃ ವಿರುದ್ಧ ಃ-

ಆರೋಪಿ ನಂ.1ಃ ಮಲ್ಲಪ್ಪ ತಂದೆ ಶರಣಪ್ಪ ಕೆಸರಟಗಿ,
ವಃ 48 ವರ್ಷ, ಉಃ ಕೂಲಿ ,
ಸಾಃ ನೀಲಹಳ್ಳಿ ತಾಃ ಸೇಡಂ.

2. ಅರ್ಜುನ ತಂದೆ ಶರಣಪ್ಪ ನಿಂಗಾಪೂರ ,**(Abated)**
ವಃ 55 ವರ್ಷ, ಉಃ ಕೂಲಿ,
ಸಾಃ ಶೆಟ್ಟಿಹೂಡಾ, ತಾಃ ಸೇಡಂ .

----

**ದೋ ಷಾ ರೋ ಪ ಣೆ**

ನಾನು ಶ್ರೀಮತಿ ಲಲಿತಾ ಕುದರಿಮತಿ, ಬಿಕಾಂ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 24-03-2018 ರಂದು ಸಾಯಂಕಾಲ 03.45 ಗಂಟೆಗೆ ಸೇಡಂ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ದೊಡ್ಡ ಅಗಸಿ ಏರಿಯಾದಲ್ಲಿ ಆರೋಪಿತರು ಅಕ್ರಮವಾಗಿ ಯಾವುದೇ ಕಾಗದ ಪತ್ರಗಳು ಇಲ್ಲದೇ ಸೇಂದಿ ಮಾರಾಟ ಮಾಡುತ್ತಿರುವಾಗ ಚಾಸಾ ನಂ 1 ನೇದ್ದವರು ಚಾಸಾ ನಂ 2, 3 ನೇದ್ದವರ ಸಮಕ್ಷಮದಲ್ಲಿ ಚಾಸಾ ನಂ 4 ರಿಂದ 6 ನೇದ್ದವರು ಸಹಾಯದಿಂದ ದಾಳಿ ಮಾಡಿ ಆರೋಪಿತರಿಂದ ಸದರಿ ಸೇಂದಿಯನ್ನು ಜಪ್ತಿ ಮಾಡಿದ್ದು ಹಾಗೂ ಸದರಿ ಸೇಂದಿಯನ್ನು ರಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಸದರಿ ಸೇಂದಿಯ ಸೇವನೆಯಿಂದ ಮಾನವ ಜೀವಕ್ಕೆ ಅಪಾಯವಾಗುವ ಬಗ್ಗೆ ಧೃಡಪಟ್ಟಿದ್ದು ಕಾರಣ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ಮತ್ತು ಭಾ. ದಂ. ಸಂಹಿತೆ ಕಲಂ 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

3/7

ದಿನಾಂಕಃ 03-07-2024

ಪ್ರ.ದ.ನ್ಯಾದಂ. ಸೇಡಂ.